**Q.P. Code – 50226**

**ದ್ವಿತೀಯ ಬಿ.ಎ. ಪದವಿ ಪರೀಕ್ಷೆ**

**ಅಕ್ಟೋಬರ್/ನವೆಂಬರ್ 2014**

**(ದೂರ ಶಿಕ್ಷಣ)**

**ಕನ್ನಡ ಐಚ್ಛಿಕ ಪತ್ರಿಕೆ – ೨**

**(DAB 430) – ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳು**
**(ಪಠ್ಯಗಳು : ಹರಿಶ್ಚಂದ್ರ ಕಾವ್ಯ ಸಂಗ್ರಹ, ಆಯ್ದ ಕುವೆಂಪು ಕವನಗಳು ಮತ್ತು ಗೆಲಿಲಿಯೊ)**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ಬರೆಯಿರಿ : **5**

(೧) ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ
ಶರಧಿ ಪರಿವೃತ ಧರೆಯ ಸಿರಿಯ ಸೊಬಗಜ್ಞಾತವಾಸಕ್ಕೆ ಪೋಗುತಿದೆ ಕೋ
ಎರೆವ ದೀನಾನಾಥರಾನಂದವಡಗುತಿದೆ
ವರಮುನೀಂದ್ರರ ಯಾಗರಕ್ಷೆ ಬಲವಳಿಯುತಿದೆ
ನಿರುತವೆಂದೊಂದಾಗಿ ಬಂದು ಸಂದಿಸಿ ನಿಂದ ಮಂದಿ ನೆಱೆ ಮೊಱೆಯಿಟ್ಟುದು

(೨) ಜಗದೀಶ್ವರನೇ ವಿಶ್ವಸಂಸಾರಿಯಾಗಿರಲು
ಸಂಸಾರ ಪಾಶವೆಂದನಬೇಡವೈ
ಹುಟ್ಟುಹಾಕಲು ನಿನಗೆ ಬಾರದಿರೆ, ಕೂಡದಿರೆ
ಬರಿದೆ ನೀಂ ದೋಣಿಯನು ಶಪಿಸಬೇಡೈ

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **4**

ಹಡಪಿಗ, ಸತ್ತಿಗೆ, ತೊತ್ತು, ಜೂಟ, ವಿಪಿನ, ಜಿಹ್ವೆ,
ಇಕ್ಷು, ನೇಣು, ತೆಂಗಾಯ್, ಬಲ್ಸರಿ, ನಿಕೇತನ, ಕಂಕಾಲ.

(ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 2 = 4**

(೧) ವಸಿಷ್ಠ
(೨) ಜೇನಾಗುವ
(೩) ಚಿಕ್ಕಪಾದ್ರಿ

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **4 × 3 = 12**

(೧) ಧರೆಯೊಳಗೆ ಬಿತ್ತಿಲ್ಲ ಬೆಳೆಯಿಲ್ಲ ನೀರಿಲ್ಲ.

(೨) ಹುಸಿಗೆ ಹೂಂಕೊಳಿಸುವೆಂ

(೩) ಒಡೆಯನತಿಕೋಪಿ ಹೆಂಡತಿ ಮಹಾಮೂರ್ಖೆ

(೪) ಆನಂದಮಯ ಈ ಜಗ ಹೃದಯ

(೫) ನೀ ಆರು ಕಾಸು ನಾ ಮೂರು ಕಾಸು ಕೂಡಿದರೆ ನಮ್ಮ ರೂಪಾಯಿ ಕೋಟಿ

(೬) ದೇವರ ಗುಡಿಯಲಿ ಪೂಜಾರಿಯೆ ದಿಟದ ನಿವಾಸಿ

(೭) ಮುಳ್ಳಿಲ್ಲದೆ ಗುಲಾಬಿ ಇಲ್ಲ, ಪಾದ್ರಿಗಳಿಲ್ಲದೆ ರಾಜರಿಲ್ಲ

(೮) ನನ್ನ ವಿಜ್ಞಾನಕ್ಕೆ ಜ್ಞಾನದ ದಾಹ ಇದೆ.

3. (ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

(೧) ಸತ್ಯ ಪ್ರತಿಪಾದನೆಗಾಗಿ ಹರಿಶ್ಚಂದ್ರ ತನ್ನವರನ್ನು ಮಾರಿಕೊಳ್ಳಬೇಕಾದ ಅನಿವಾರ್ಯವಿತ್ತೇ – ಚರ್ಚಿಸಿ.

(೨) ಚಂದ್ರಮತಿ ಅಳಲನ್ನು ವಿವರಿಸಿ.

(ಆ) ಯಾವುದಾದರೂ **ಒಂದನ್ನು** ಕುರಿತು ಬರೆಯಿರಿ : **5**

(೧) ವಿಶ್ವಾಮಿತ್ರನ ಕುತಂತ್ರಗಳು.

(೨) ಹರಿಶ್ಚಂದ್ರ ಮತ್ತು ವೀರಬಾಹುಕನ ಮಾತುಕತೆ.

4. (ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

(೧) ಅನಿಕೇತನ ಮತ್ತು ಪಕ್ಷಿ ಕವಿತೆಗಳ ಭಾವಸ್ವಾರಸ್ಯವನ್ನು ವಿವರಿಸಿ.

(೨) ಓ ಬನ್ನಿ ಸಹೋದರರೆ, ಬೇಗ ಬನ್ನಿ ಮತ್ತು ಕ್ರಾಂತಿಕಾಳಿ ಕವಿತೆಗಳ ಸಂದೇಶವೇನು – ವಿವರಿಸಿ.

(ಆ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **5**

(೧) ದೇವರ ರುಜು ಕವಿಗೆ ಕಂಡ ಸಂದರ್ಭವನ್ನು ಬರೆಯಿರಿ.

(೨) ಹಸಿರು ಪ್ರಾಣದ ಉಸಿರೇ – ಹೇಗೆ ಚರ್ಚಿಸಿ.

5. (ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

(೧) ಗೆಲಿಲಿಯೋ ಮತ್ತು ಚಿಕ್ಕಪಾದ್ರಿ ನಡುವಿನ ಮಾತುಕತೆಯನ್ನು ಸಂಗ್ರಹಿಸಿ ಬರೆಯಿರಿ.

(೨) ಭೂ ಕೇಂದ್ರ ಸಿದ್ಧಾಂತವನ್ನು ವಿವರಿಸಿ.

(ಆ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **5**

(೧) ಚರ್ಚ್ ಮತ್ತು ಗೆಲಿಲಿಯೋ ಸಂಘರ್ಷವನ್ನು ವಿವರಿಸಿ.

(೨) ಫೆಡರ್‌ಜೋನಿ ಮತ್ತು ಮಿಸಸ್ ಸಾರ್ತಿ ಪಾತ್ರಗಳನ್ನು ಪರಿಚಯಿಸಿ.

(**80** ಅಂಕಗಳ ಸ್ಕೀಮ್‌ನವರಿಗೆ **ಕಡ್ಡಾಯ** ಪ್ರಶ್ನೆ) :

6. ಯಾವುದಾದರೂ **ಒಂದಕ್ಕೆ** ಉತ್ತರಿಸಿ : **10**

(೧) ದೇವರು ಪೂಜಾರಿ ಮತ್ತು ಇಂದಿನ ದೇವರು ಕವಿತೆಗಳ ಆಶಯವನ್ನು ವಿವರಿಸಿ.

(೨) 'ಕಲ್ಕಿ' ಕವನ ಸಾಮಾಜಿಕ ಅಸಮಾನತೆಯ ಆಕ್ರೋಶವೇ – ಚರ್ಚಿಸಿ.

---